## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಗುಬ್ಬಿ

**ಸಿ.ಸಿ. ನಂ. 117/2016**

ಚಾಸಾ. 2

ಪ್ರಾಸಾ. 2

**ದಿನಾಂಕಃ-08.03.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷೀದಾರರ ಹೆಸರು | ಃ | ಬಸವರಾಜಯ್ಯ |
| ತಂದೆಯ ಹೆಸರು | ಃ | ಶಿವಣ್ಣ |
| ವಯಸ್ಸು | ಃ | 63 |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಸಿ ನಂದಿಹಳ್ಳಿ |

**ಮುಖ್ಯ ವಿಚಾರಣೆ ಃ ಎಪಿಪಿರವರಿಂದ**

ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಅದಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು.

ನಿಪಿ.2ಕ್ಕೆ ದಿನಾಂಕಃ-20.12.2015 ರಂದು ಬಿದರೆ ವ್ಯವಸಾಯ ಸೇವಾ ಸಹಕಾರ ಸಂಘದ ಬಳಿ ಸಹಿ ಮಾಡಿರುತ್ತೇನೆ. ಸೊಸೈಟಿಯಲ್ಲಿ ಕಳ್ಳತನವಾದ ವಿಚಾರವಾಗಿ ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡುವ ಸಮಯದಲ್ಲಿ ನಿಪಿ.2ಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಪಂಚನಾಮೆಯ ಸಮಯದಲ್ಲಿ ಸ್ಥಳದಿಂದ ಪೊಲೀಸರು 3 ಬೀಗ, ಒಂದು ಪಿಕಾಸಿ, ಒಂದು ಪಿಕಾಸಿಯ ಕಾವು ಅಮಾನತುಪಡಿಸಿಕೊಂಡರು. ನಿಪಿ.2ಕ್ಕೆ ನನ್ನೊಂದಿಗೆ ಚಾಸಾ.3 ಮತ್ತು 4 ರವರು ಸಹ ಸಹಿ ಮಾಡಿರುತ್ತಾರೆ. ನಿಪಿ.2ನ್ನು ಆ

ದಿನ ಮಧ್ಯಾಹ್ನ 11.30 ರಿಂದ 12.00 ರ ಸಮಯದಲ್ಲಿ ತಯಾರಿಸಿರುತ್ತಾರೆ. ನಿಪಿ.2 ರಾಡಿಯಲ್ಲಿ ಅಮಾನತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು **ಈ ದಿನ ನ್ಯಾಯಾಲಯದ ಮುಂದಿರುವ 2 ಮುರಿದಿರುವ ಸ್ಟಿಲ್ ಬೀಗಗಳನ್ನು, ಒಂದು ಮುರಿದ ಹಿತ್ತಾಳೆಯ ಬೀಗ, ಒಂದು ಪಿಕಾಸಿ ಮತ್ತು ಒಂದು ಪಿಕಾಸಿಯ ಕಾವನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ 2 ಮುರಿದಿರುವ ಸ್ಟಿಲ್ ಬೀಗಗಳನ್ನು ಈಗಾಗಲೇ ಮುದ್ದೆಮಾಲು 1 ಮತ್ತು 2 ಎಂದು, ಒಂದು ಮುರಿದ ಹಿತ್ತಾಳೆಯ ಬೀಗವನ್ನು ಈಗಾಗಲೇ ಮುದ್ದೆಮಾಲು 3 ಎಂದು, ಒಂದು ಪಿಕಾಸಿಯನ್ನು ಈಗಾಗಲೇ ಮುದ್ದೆಮಾಲು 4 ಎಂದು ಮತ್ತು ಒಂದು ಪಿಕಾಸಿಯ ಕಾವನ್ನು ಈಗಾಗಲೇ ಮುದ್ದೆಮಾಲು 5 ಎಂದು ಗುರುತಿಸಲಾಗಿದೆ.**

**ಪಾಟೀ ಸವಾಲು ಃ ಆರೋಪಿಗಳ ಪರ ವಕೀಲರಾದ ಶ್ರೀ. ಕೆ ಸಿ ಎನ್ ರವರಿಂದ**

ನಾನು ಬಿದರೆಯ ವಿ ಎಸ್ ಎಸ್ ಎನ್ ಸೊಸೈಟಿಯ ಡೈರೆಕ್ಟರ್ ಎಂದರೆ ಸರಿ. ನನ್ನ ಸ್ವಂತ ಊರು ಸಿ ನಂದಿಹಳ್ಳಿ ಎಂದರೆ ಸರಿ. ಬಿದರೆಗೂ ಸಿ ನಂದಿಹಳ್ಳಿಗೂ ಸುಮಾರು 5 ಕಿ ಮಿ ಅಂತರ ಇದೆ. ಬಿದರೆ ಗ್ರಾಮದಲ್ಲಿ ಸುಮಾರು 1 ಸಾವಿರ ಮನೆಗಳು ಇವೆ. ಬಿದರೆಯ ವಿ ಎಸ್ ಎಸ್ ಎನ್ ಸೊಸೈಟಿಯ ಸುತ್ತ-ಮುತ್ತಲೂ ಮನೆಗಳು ಇವೆ ಎಂಬ ಪ್ರಶ್ನೆಗೆ ಸಾಕ್ಷಿಯು ಸ್ವಲ್ಪ ದೂರದಲ್ಲಿ ಇದೆ ಎಂದು ನುಡಿಯುತ್ತಾರೆ.  ಚಾಸಾ.3 ಮತ್ತು 4 ರವರು ಸಹ ಬಿದರೆಯ ವಿ ಎಸ್ ಎಸ್ ಎನ್ ಸೊಸೈಟಿಯ ಡೈರೆಕ್ಟರ್‌ಗಳು ಎಂದರೆ ಸರಿ. ಪೊಲೀಸರು ನನಗೆ ಪಂಚರಾಗುವಂತೆ

ಯಾವುದೇ ನೋಟೀಸು ನೀಡಿಲ್ಲ. ನಾನು ಬಿದರೆಯ ವಿ ಎಸ್ ಎಸ್ ಎನ್ ಸೊಸೈಟಿಯ ಡೈರೆಕ್ಟರ್ ಇರುವುದರಿಂದ ಪ್ರತಿದಿನ ಸದರಿ ಸೊಸೈಟಿಯಲ್ಲಿ ಎಷ್ಟು ಹಣ ಬರುತ್ತದೆ ಎಂಬ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ಕಳ್ಳತನವಾಗಿದೆ ಎಂದು ಹೇಳಿದ ದಿನ ಸೊಸೈಟಿಯಲ್ಲಿ ಎಷ್ಟು ಹಣ ಇತ್ತು ಎಂಬ ಬಗ್ಗೆ ಪ್ರಾಸಾ.1 ರವರು ನಿಮಗೇನಾದರೂ ಹೇಳಿದ್ದಾರೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಪ್ರಾಸಾ.1 ರವರು ಆದರ ಬಗ್ಗೆ  ಹೇಳಿಲ್ಲ ಎಂದು ನುಡಿಯುತ್ತಾರೆ.

ಬಿದರೆ ವಿ ಎಸ್ ಎಸ್ ಎನ್ ಸೊಸೈಟಿಯಲ್ಲಿ ಒಟ್ಟು 15 ಹಳ್ಳಿಗಳು ಬರುತ್ತವೆ, 15 ಹಳ್ಳಿಗಳಿಗೆ ಸಂಬಂಧಿಸಿದಂತೆ ಒಟ್ಟು ಎಷ್ಟು ಪಡಿತರ ಚೀಟಿಗಳು ಇವೆ ಎಂದು ನನಗೆ ಗೊತ್ತಿಲ್ಲ. ಮುದ್ದೆಮಾಲು 1 ರಿಂದ 3 ಯಾವ ಕಂಪನಿಯದ್ದು ಎನ್ನುವುದು ನನಗೆ ಗೊತ್ತಿಲ್ಲ. ನಿಪಿ.2ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆಮಾಲು 1 ರಿಂದ 5 ನನ್ನ ಸಮಕ್ಷಮ ಸ್ಥಳದಲ್ಲಿ ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ಘಟನೆಯ ಬಗ್ಗೆ ಯಾವುದೇಮಾಹಿತಿ ಇಲ್ಲದಿದ್ದರೂ ನಾನು ಬಿದರೆ ವಿ ಎಸ್ ಎಸ್ ಎನ್ ಸೊಸೈಟಿಯ ಡೈರೆಕ್ಟರ್ ಆದ ಕಾರಣ ಪ್ರಾಸಾ.1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಬ್ಬಿ